ದಿನಾಂಕಃ22-02-2022 ರಂದು ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಸಾಕ್ಷಿದಾರರನ್ನು ಪುನಃ ಕರೆಯಿಸಿ Thermal Test ಮೂಲಕ ಪರೀಕ್ಷಿಸಿದಾಗ ಕೋವಿಡ್ -19 ರ ಯಾವುದೇ ಲಕ್ಷಣಗಳು ಕಂಡುಬಂದಿರುವುದಿಲ್ಲ ಆ ಕಾರಣದಿಂದ ಸಾಕ್ಷಿದಾರರನ್ನು ಪ್ರಮಾಣೀಕರಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ಎಪಿಪಿ ಅವರಿಂದಃ**

ನಾನು ಸದರಿ ಕೇಸಿನಲ್ಲಿ ರಾಣೇಬೆನ್ನೂರು ಶಹರ ಪೋಲಿಸರು ಕೆಲವು

ದಾಖಲೆಗಳನ್ನು ಹಾಜರುಪಡಿಸಲು ತಿಳಿಸಿದ ಪ್ರಕಾರ ನಾನು ಅವರಿಗೆ ದಿಃ 30-07-2012 ರಂದು ಸುಕೋ ಬ್ಯಾಂಕ್ ಶಾಖೆ , ಹುಬ್ಬಳ್ಳಿಯವರಿಗೆ ದಿ ವರ್ಧಮಾನ ಕೋ-ಅಪರೇಟಿವ್ ಬ್ಯಾಂಕ್ ಲಿ. ರಾಣೇಬೆನ್ನೂರು ಶಾಖೆಯಿಂದ ರೂ.3,00,000/- ಸಾಲವನ್ನು ಪಡೆದುಕೊಂಡಿದ್ದ ಸುಂದರಬಾಯಿ ಪಾಂಡುರಂಗ ರಾವ್ ಗಾವಡೆ , ಸಾಃ ರಾಣೇಬೆನ್ನೂರು ಇವರು ಬ್ಯಾಂಕ್ ಗೆ ಸಾಲವನ್ನು ಮರುಪಾವತಿ ಮಾಡದೇ ಮರುಪಾವತಿಸಿರುವುದಾಗಿ ಖೊಟ್ಟಿ ಡಿ.ಟಿ.ಡಿ ಖುಲಾಸೆ ಪತ್ರವನ್ನು ಮಾಡಿಕೊಂಡು ಸದರಿ ಮನೆಯ ಖರೀದಿ ಹಾಗು ಬೋಜಾ ಕಡಿಮೆಗೊಳಿಸಿಕೊಂಡು ಬೇರೆಯವರಿಗೆ ಮಾರಾಟ ಮಾಡಿ ಬ್ಯಾಂಕ್ ಗೆ ಮೋಸಗೊಳಿಸಿರುತ್ತಾರೆ ಅಂತಾ ತನಿಖಾಧಿಕಾರಿಗಳಿಗೆ ನಾನು ಅವರು ಕೇಳಿದಂತೆ ದಿಃ 18-09-2007 ರ ಪತ್ರದಲ್ಲಿ ಉಲ್ಲೇಖಿಸಿದಂತೆಃ-

1. ಎಸ್.ಟಿ.ದುರ್ಗದ ರವರ ಮರಣ ಪ್ರಮಾಣ ಪತ್ರ

2. ದಿಃ 12-09-2010 ರ ಪತ್ರದಲ್ಲಿ ತಾವುಗಳು ಯಾವ-ಯಾವ ಸಾಲ ಮರುಪಾವತಿಗೆ ತಮ್ಮ ಸಿಬ್ಬಂದಿಗಳನ್ನು ಕಳುಹಿಸಿದ್ದೀರಿ ಎನ್ನುವ ವಿವರಣೆ

3. ದಿಃ 06-12-2004 ಮತ್ತು ದಿಃ 26-05-2010 ರಂದು ಆರೋಪಿತರಿಗೆ ಸಾಲ ಮರುಪಾವತಿ ಕುರಿತು ನೀಡಿದ ನೋಟಿಸ್ ಗಳ ಸ್ವೀಕೃತಿ ಪತ್ರಗಳು .

4. ದಿಃ 18-09-2007 ಮತ್ತು ದಿಃ 04-10-2010 ರಂದು ಆರೋಪಿತರಿಗೆ ಸಾಲ ಮರುಪಾವತಿಗಾಗಿ ಕಳುಹಿಸಿದ ಪತ್ರಗಳ ಜಾವಕ ನಂಬರಗಳುಳ್ಳ ಜಾವಕ ರಿಜಿಸ್ಟರ .

ಈಗ ನೋಡುತ್ತಿರುವ ನಿಪಿ-76 ಲಕೋಟೆಯಲ್ಲಿರುವ ದಿಃ 06-12-04 ರಂದು 1 ನೇ ಆರೋಪಿತರಾದ ಸುಂದರಬಾಯಿ ಗಾವಡೆ ರವರಿಗೆ ನಮ್ಮ ಬ್ಯಾಂಕ್ ಜೊತೆ

ವಿಲೀನಗೊಂಡ ವರ್ಧಮಾನ ಬ್ಯಾಂಕ್ ನಿಂದ ನೀಡಿದ Sarfasei Act ಅಡಿಯಲ್ಲಿ ನೀಡಿದ ನೋಟಿಸ್ ನ ಪ್ರತಿ ಆಗಿರುತ್ತದೆ . ಅದನ್ನು ನಿಪಿ-76(ಎ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ನಿಪಿ-77 ಲಕೋಟೆಯಲ್ಲಿರುವ ದಿಃ 06-12-04 ರಂದು ಜಾಮೀನುದಾರರಾದ ಮೃತ್ಯುಂಜಯ ಅಂಗಡಿ ರವರಿಗೆ ನಮ್ಮ ಬ್ಯಾಂಕ್ ಜೊತೆ ವಿಲೀನಗೊಂಡ ವರ್ಧಮಾನ ಬ್ಯಾಂಕ್ ನಿಂದ ನೀಡಿದ Sarfasei Act ಅಡಿಯಲ್ಲಿ ನೀಡಿದ ನೋಟಿಸ್ ನ ಪ್ರತಿ ಆಗಿರುತ್ತದೆ . ಲಕೋಟೆಯನ್ನು ತೆರೆದು ನೋಡಲಾಗಿ ಅದರಲ್ಲಿರುವ ನೋಟಿಸ್ ನ ಪ್ರತಿಯನ್ನು ನಿಪಿ-77(ಎ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ನಿಪಿ-78 ಲಕೋಟೆಯಲ್ಲಿರುವ ದಿಃ26-05-2010 ರಂದು 2 ನೇ ಆರೋಪಿತರಾದ ಉದಯ ಗಾವಡೆ ರವರಿಗೆ ನಮ್ಮ ಬ್ಯಾಂಕ್ ಜೊತೆ ವಿಲೀನಗೊಂಡ ವರ್ಧಮಾನ ಬ್ಯಾಂಕ್ ನಿಂದ ನೀಡಿದ ಸಾಲ ಮರುಪಾವತಿಗಾಗಿ ನೀಡಿದ ನೋಟಿಸ್ ನ ಪ್ರತಿ ಆಗಿರುತ್ತದೆ. ಲಕೋಟೆಯನ್ನು ತೆರೆದು ನೋಡಲಾಗಿ ಅದರಲ್ಲಿರುವ ನೋಟಿಸ್ ನ ಪ್ರತಿಯನ್ನು ನಿಪಿ-78(ಎ) ಎಂದು ಗುರುತಿಸಲಾಯಿತು. ಸದರಿ ನೋಟಿಸ್ ನ್ನು ವಿಮಲ್ ಪಾಯಪ್ಪನವರು ಎಂಬುವವರು ದಿಃ 26-05-2010 ಮತ್ತು ದಿಃ 27-05-2010 ರಂದು ನಾನು ರಜೆಯಲ್ಲಿದ್ದಾಗ 2 ನೇ ಆರೋಪಿತರಿಗೆ ನೀಡಿದ ನೋಟಿಸ್ ಪ್ರತಿ ಆಗಿರುತ್ತದೆ . ಸದರಿ ನೋಟಿಸ್ ನಲ್ಲಿರುವ ಸಹಿ ವಿಮಲ್ ಪಾಯಪ್ಪನವರ ಸಹಿ ಆಗಿರುತ್ತದೆ .

ಈಗ ನೋಡುತ್ತಿರುವ ನಿಪಿ-79 ಲಕೋಟೆಯಲ್ಲಿರುವ ದಿಃ26-05-2010 ರಂದು ಜಾಮೀನುದಾರರಾದ ಮೃತ್ಯುಂಜಯ ಹೇಮಪ್ಪ ಅಂಗಡಿ ರವರಿಗೆ ನಮ್ಮ ಬ್ಯಾಂಕ್

ಜೊತೆ ವಿಲೀನಗೊಂಡ ವರ್ಧಮಾನ ಬ್ಯಾಂಕ್ ನಿಂದ ನೀಡಿದ ಸಾಲ ಮರುಪಾವತಿಗಾಗಿ ನೀಡಿದ ನೋಟಿಸ್ ನ ಪ್ರತಿ ಆಗಿರುತ್ತದೆ. ಲಕೋಟೆಯನ್ನು ತೆರೆದು ನೋಡಲಾಗಿ ಅದರಲ್ಲಿರುವ ನೋಟಿಸ್ ನ ಪ್ರತಿಯನ್ನು ನಿಪಿ-79(ಎ) ಎಂದು ಗುರುತಿಸಲಾಯಿತು. ಸದರಿ ನೋಟಿಸ್ ನ್ನು ವಿಮಲ್ ಪಾಯಪ್ಪನವರು ಎಂಬುವವರು ದಿಃ 26-05-2010 ಮತ್ತು ದಿಃ 27-05-2010 ರಂದು ನಾನು ರಜೆಯಲ್ಲಿದ್ದಾಗ ಜಾಮೀನುದಾರರಾದ ಮೃತ್ಯುಂಜಯ ಹೇಮಪ್ಪ ಅಂಗಡಿ ರವರಿಗೆ ನೀಡಿದ ನೋಟಿಸ್ ಪ್ರತಿ ಆಗಿರುತ್ತದೆ . ಸದರಿ ನೋಟಿಸ್ ನಲ್ಲಿರುವ ಸಹಿ ವಿಮಲ್ ಪಾಯಪ್ಪನವರ ಸಹಿ ಆಗಿರುತ್ತದೆ .

ಅದೇ ರೀತಿ 2 ನೇ ಆರೋಪಿತರಾದ ಉದಯ ಗಾವಡೆ ಮತ್ತು ಸಹಲಿಂಗಪ್ಪ ಟಿ ದುರ್ಗದ ರವರಿಗೆ ನೋಟಿಸ್ ಜಾರಿಯಾದ ಬಗ್ಗೆ ಅಂಚೆ ಸ್ವೀಕೃತಿ ಪತ್ರ ಗಳು ನಮ್ಮ ಬ್ಯಾಂಕ್ ಗೆ ಮರಳಿ ಬಂದಿರುತ್ತವೆ. ಈಗ ನೋಡುತ್ತಿರುವ ನಿಪಿ-80 ರಿಂದ ನಿಪಿ-82 ಸದರಿ ಅಂಚೆ ಸ್ವೀಕೃತಿ ಪತ್ರ ಗಳಾಗಿರುತ್ತವೆ .

ದಿಃ 17-08-2012 ರಂದು ನಾನು ರಾಣೇಬೆನ್ನೂರು ಶಹರ ಪೋಲಿಸರಿಗೆ ಹೆಚ್ಚುವರಿ ದಾಖಲೆಗಳನ್ನು ಒದಗಿಸುತ್ತಿರುವ ಕುರಿತು ಒಂದು ಪತ್ರವನ್ನು ಬರೆದಿರುತ್ತೇನೆ ಈಗ ನೋಡುತ್ತಿರುವ ದಾಖಲೆ ನಿಪಿ- 73 ಸದರಿ ಪತ್ರ ಆಗಿರುತ್ತದೆ ಅದರಲ್ಲಿರುವ ಸಹಿ ನನ್ನದು. ಸಾಕ್ಷಿ ಗುರುತಿಸಿರುವ ಸಾಕ್ಷಿಯ ಸಹಿಯನ್ನು ನಿಪಿ-73(ಬಿ) ಎಂದು ಗುರುತಿಸಲಾಯಿತು.

ಆರೋಪಿತರು ಸಾಲ ಮರುಪಾವತಿಗಾಗಿ ವರ್ಧಮಾನ ಬ್ಯಾಂಕ್ ಹುಬ್ಬಳ್ಳಿ ಶಾಖೆಯ ವರಿಗೆ ಸಮಯವಕಾಶ ಕೋರಿ ಪತ್ರವನ್ನು ಬರೆದಿರುತ್ತಾರೆ ಈಗ ನೋಡುತ್ತಿರುವ ದಾಖಲೆ ನಿಪಿ- 74 ಸದರಿ ಪತ್ರ ಆಗಿರುತ್ತದೆ. ಅದೇ ರೀತಿ ಈಗ ನೋಡುತ್ತಿರುವ

ನಿಪಿ- 75 ಸಾಲಗಾರರ ಯಾದಿ ಆಗಿರುತ್ತದೆ.

ಈಗ ನೋಡುತ್ತಿರುವ ದಾಖಲೆ ನಾನು ಹುಬ್ಬಳ್ಳಿ ಶಾಖೆಗೆ ವರ್ಗಾವಣೆಯಾದ ಬಗ್ಗೆ ಆದೇಶ ಪ್ರತಿಯ ಪತ್ರ ಆಗಿರುತ್ತದೆ. ಸಾಕ್ಷಿ ಗುರುತಿಸಿರುವ ಸದರಿ ದಾಖಲೆಯನ್ನು ನಿಪಿ-85 ಎಂದು ಗುರುತಿಸಲಾಯಿತು.

ವಿಮಲ್ ಪಾಯಪ್ಪನವರ ಇವರು ನಾನು ದಿಃ 26-05-2010 ಮತ್ತು ದಿಃ27-05-2010 ರಂದು 2 ದಿನಗಳು ರಜೆಯಲ್ಲಿದ್ದಾಗ ಬ್ಯಾಂಕ್ ನ ಕರ್ತವ್ಯವನ್ನು ನಿರ್ವಹಿಸಿರುತ್ತಾರೆ. ಈಗ ನೋಡುತ್ತಿರುವ ದಾಖಲೆ ನನ್ನ ರಜಾ ಅರ್ಜಿ ಆಗಿದ್ದು, ಅದರಲ್ಲಿರುವ ಸಹಿ ನನ್ನದು. ಸಾಕ್ಷಿ ಗುರುತಿಸಿರುವ ರಜಾ ಅರ್ಜಿಯನ್ನು ನಿಪಿ-86 ಎಂದು, ಸಹಿಯನ್ನು ನಿಪಿ-86(ಎ) ಎಂದು ಗುರುತಿಸಲಾಯಿತು.

ಸದರಿ ಪ್ರಕರಣದ ಬಗ್ಗೆ ಸುಂದರಬಾಯಿ ಗಾವಡೆ ರವರು ಸಾಲದ ನಕಲಿ ಖುಲಾಸೆ ಪತ್ರದ ಪ್ರಕರಣ ಕುರಿತು ನಮ್ಮ ಮುಖ್ಯ ಕಚೇರಿ ಸುಖೋ ಬ್ಯಾಂಕ್, ಹುಬ್ಬಳ್ಳಿ ರವರಿಗೆ ವರದಿಯನ್ನು ನೀಡಿರುತ್ತೇನೆ. ಈಗ ನೋಡುತ್ತಿರುವ ದಾಖಲೆ ಸದರಿ ವರದಿ ಪ್ರತಿ ಆಗಿದ್ದು ಅದರಲ್ಲಿರುವ ಸಹಿ ನನ್ನದು. ಸಾಕ್ಷಿ ಗುರುತಿಸಿರುವ ಸದರಿ ದಾಖಲೆಯನ್ನು ನಿಪಿ-87 ಎಂದು, ಸಹಿಯನ್ನು ನಿಪಿ-87(ಎ) ಎಂದು ಗುರುತಿಸಲಾಯಿತು.

ಅದೇ ರೀತಿ ಎ.ಬಿ.ಎನ್ ದಾವಾ ಪ್ರಕ್ರಿಯೆಯ ಕುರಿತು ವಾದಿಗೆ ನೀಡಿದ ಸಮನ್ಸ ಪ್ರತಿ ಮತ್ತು ಮುದ್ದತ್ತಿನ ಮಾಹಿತಿ ಪತ್ರ ಪತ್ರದ ಬಗ್ಗೆ ಪೋಲಿಸರಿಗೆ ಮಾಹಿತಿಯ ನ್ನು ನೀಡಿರುತ್ತೇನೆ. ಈಗ ನೋಡುತ್ತಿರುವ ದಾಖಲೆ ಸದರಿ ಮಾಹಿತಿ ಪತ್ರ ಆಗಿದ್ದು, ಅದರಲ್ಲಿರುವ ಸಹಿ ನನ್ನದು. ಸಾಕ್ಷಿ ಗುರುತಿಸಿರುವ ಸದರಿ ಮಾಹಿತಿ ಪತ್ರವನ್ನು ನಿಪಿ-88 ಎಂದು, ಸಹಿಯನ್ನು ನಿಪಿ-88(ಎ) ಎಂದು ಗುರುತಿಸಲಾಯಿತು. ಸದರಿ ನಿಪಿ-88 ರಂತೆ

ಪೋಲಿಸರಿಗೆ ನಾನು ಸದರಿ ದಾಖಲೆಗಳನ್ನು ಸಹ ನೀಡಿರುತ್ತೇವೆ.

ಅದೇ ರೀತಿ ದಿಃ 22-06-2009 ರ ಪ್ರಕಾರ Opening Balance ನಗದು ಶುಲ್ಕದ ಬಗ್ಗೆ Balance sheet ನ ಪ್ರತಿ ಆಗಿರುತ್ತದೆ . ಸಾಕ್ಷಿ ಗುರುತಿಸಿರುವ ಸದರಿ Balance sheet ನ ಪ್ರತಿಯನ್ನು ನಿಪಿ-89 ಎಂದು, ಸಹಿಯನ್ನು ನಿಪಿ-89(ಎ)ಎಂದು ಗುರುತಿಸಲಾಯಿತು. ಆರೋಪಿತರು ಆ ದಿನ ಸಾಲದ ರೂ.3,00,000/- ಹಣವನ್ನು ಮರುಪಾವತಿ ಮಾಡಿರುತ್ತೇವೆ ಎಂದು ಹೇಳಿದ್ದು ಆದರೆ ಸದರಿ Balance sheet ನ ಪ್ರಕಾರ ಅವರು ಯಾವುದೇ ಹಣ ಸಂದಾಯ ಮಾಡಿರುವುದಿಲ್ಲ ಮತ್ತು ಆ ದಿನ ದ Opening Balance ರೂ.1,49,147/- ಮಾತ್ರ ಆಗಿರುತ್ತದೆ. ಸದರಿ ಶರಾವನ್ನು ನಿಪಿ-89(ಬಿ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ದಾಲೆ ಎಸ್.ಟಿ.ದುರ್ಗದ ರವರ ಮರಣ ಪ್ರಮಾಣ ಪತ್ರ ಆಗಿದ್ದು, ಅದನನ್ನು ನಾನು ಪೋಲಿಸರಿಗೆ ನೀಡಿರುತ್ತೇನೆ. ಸಾಕ್ಷಿ ಗುರುತಿಸಿರುವ ಎಸ್.ಟಿ.ದುರ್ಗದರವರ ಮರಣ ಪ್ರಮಾಣ ಪತ್ರವನ್ನು ನಿಪಿ-90 ಎಂದು ಗುರುತಿಸಲಾಯಿತು.

ಸದರಿ ಆರೋಪಿತರು ಎಸಗಿದ ಕೃತ್ಯದ ಕುರಿತು ಪ್ರಕರಣವನ್ನು ದಾಖಲಿಸಲು ನಾವು ನಮ್ಮ ಬ್ಯಾಂಕ್‌ನ ಕಾನೂನು ಸಲಹೆಗಾರರಾದ ಎ.ಸಿ.ನವಲೂರು ರವರಿಂದ ಅಭಿಪ್ರಾಯವನ್ನು ಕೇಳಿ ಪತ್ರವನ್ನು ಬರೆದಿರುತ್ತೇವೆ . ಈಗ ನೋಡುತ್ತಿರುವ ದಾಖಲೆ ಸದರಿ ಪತ್ರ ಆಗಿದ್ದು , ಅದರಲಿಲರುವ ಸಹಿ ನನ್ನದು , ಸಾಕ್ಷಿ ಗುರುತಿಸಿರುವ ಸದರಿ ದಾಖಲೆಯನ್ನು ನಿಪಿ-91 ಎಂದು, ಸಹಿಯನ್ನು ನಿಪಿ-91(ಎ) ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ದಾಖಲೆ ನಿಪಿ-23 ಅವರು ಆರೋಪಿತರ ವಿರುದ್ದ ಕ್ರಮ ಕೈಗೊಳ್ಳಬಹುದು ಎಂದು ನೀಡಿರುವ ಅಭಿಪ್ರಾಯ ಪತ್ರ ಆಗಿರುತ್ತದೆ.

ಆರೋಪಿತರು ವಾಯ್.ಸಿ.ನವಲಗುಂದ , ವ್ಯವಸ್ಥಾಪಕರು , ವರ್ಧಮಾನ ಬ್ಯಾಂಕ್ , ಹುಬ್ಬಳ್ಳಿ ಶಾಖೆ ರವರಿಗೆ ಸದರಿಯವರ ಸಹಿಯನ್ನು ಆರೋಪಿತರು ಖೊಟ್ಟಿಯಾಗಿ ಸಾಲಮರುಪಾವತಿ ಮಾಡುರುವಂತೆ ದಾಖಲೆಗಳನ್ನು ಸಹಿ ಮಾಡಿ , ವಿನಾಯಿತಿ ಪತ್ರ ಗಳು ಮತ್ತು ಡಿ.ಟಿ.ಡಿ ಪತ್ರ ಗಳನ್ನು ಖೊಟ್ಟಿಯಾಗಿ ಸೃಷ್ಟಿಸಿ ಅಸ್ತಿತ್ವದಲ್ಲಿ ಇರದ ವರ್ಧಮಾನ ಬ್ಯಾಂಕ್ ನ Letter Head ನ್ನು ಖೊಟ್ಟಿಯಾಗಿ ತಯಾರಿಸಿ ತಹಶೀಲ್ದಾರವರಿಗೆ ಕೊಟ್ಟಿರುತ್ತಾರೆ . ಅದೇ ರೀತಿ ಪಾಲಾಕ್ಷಪ್ಪ ಅಂಗಡಿ ಎಂಬುವವರಿಗೆ ನಮ್ಮ ಬ್ಯಾಂಕ್ ನಲ್ಲಿ ಸಾಲವಿದ್ದರೂ ಕೂಡಾ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ಮನೆಯನ್ನು ಅವರಿಗೆ ನಮಗೆ ತಿಳಿಸದೇ ಮಾರಾಟ ಮಾಡಿ ಬ್ಯಾಂಕ್ ಗೆ ಮೋಸ ಮಾಡಿರುತ್ತಾರೆ . ಸದರಿ ಆರೋಪಿತರು ಸಾಲ ಮರುಪಾವತಿ ಮಾಡಿರುತ್ತೇವೆ ಎಂದು ಖೊಟ್ಟಿಯಾಗಿ ದಾಖಲೆಗಳನ್ನು ಸೃಷ್ಟಿಸಿದ ಕಾಲದಲ್ಲಿ ವರ್ಧಮಾನ ಬ್ಯಾಂಕ್ ಸುಕೋ ಬ್ಯಾಂಕ್ ನಲ್ಲಿ ವಿಲೀನಗೊಂಡಿದ್ದು ಮತ್ತು ಆ ಸಮಯದಲ್ಲಿ ನಾನು ಸದರಿ ಬ್ಯಾಂಕ್ ನ Branch Manger ಆಗಿದ್ದು ಆದರೆ ಆರೋಪಿತರು ಮೋಸ ಮಾಡುವ ಉದ್ದೇಶದಿಂದ ವರ್ಧಮಾನ್ ಬ್ಯಾಂಕ್ ನ ವ್ಯವಸ್ಥಾಪಕರಾದ ವೈ.ಸಿ.ನವಲಗುಂದ ರವರು ಇರುತ್ತಾರೆಂದು ಅವರ ಹೆಸರಿನಲ್ಲಿ ಎಲ್ಲಾ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ , ಖೊಟ್ಟಿ ಸಹಿಗಳನ್ನು ಮಾಡಿ ನಮ್ಮ ಬ್ಯಾಂಕ್ ಗೆ ಮೋಸ ಮಾಡಿ ಸಾಲವನ್ನು ಮರುಪಾವತಿ ಮಾಡದೇ ಮನೆಯನ್ನು ಪಾಲಾಕ್ಷಪ್ಪ ಅಂಗಡಿ ಎಂಬುವವರಿಗೆ ಮಾರಾಟ ಮಾಡಿರುತ್ತಾರೆ . ಆ ಕಾಲಕ್ಕೆ ವರ್ಧಮಾನ್ ಬ್ಯಾಂಕ್ ನ ವ್ಯವಸ್ಥಾಪಕರಾದ ವೈ.ಸಿ.ನವಲಗುಂದ ರವರು ರಾಯಚೂರಿನ ಸುಕೋ ಬ್ಯಾಂಕ್ ನಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಎಲ್ಲಾ ಮೇಲೆ ಹೇಳಿದ ಕಾರಣಗಳಿಂದ ಆರೋಪಿತರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

(**ಪಾಟೀ ಸವಾಲಿಗಾಗಿ ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ ಮುಂದೂಡಲಾಯಿತು.**)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ನನ್ನ ಸಮಕ್ಷಮ

sd/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,

ಓ ಹೇ ಕೇ ಸರಿ ಇದೆ.

ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.